## 1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು

## ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ

**OS**-233/2003 **DW**-2

**ದಿಃ 17.03.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀಮತಿ ಎಸ್ ಎಸ್ ಪಿ ವಕೀಲರಿಂದಃ**

ನನ್ನ ಮನೆಯವರು ಮಿಸ್ಲೇನಿಯಸ್ ನಂಃ44/2022 ಪ್ರಕರಣದಲ್ಲಿ ನ್ಯಾಯಾಲಯಕ್ಕೆ ಬಂದು ಸಾಕ್ಷ್ಯ ನುಡಿದಿರುತ್ತಾರೆಂದರೆ ಸರಿ. ದಾವಾ ಆಸ್ತಿಯನ್ನು ನನ್ನ ಮನೆಯವರು ಖರೀದಿ ಮಾಡುವ ಸಮಯದಲ್ಲಿ ಅದರ ಬಗ್ಗೆ ಎನಕ್ವಾಯರಿ ಮಾಡಿದ್ದಾರಾ ಎಂದರೆ ಸಾಕ್ಷಿ ಮಾಡಿರುತ್ತಾರೆ ನಾನೂ ಕೂಡಾ ಅವರಿಗೆ ಅಸಿಸ್ಟ ಮಾಡಿದ್ದೇನೆ ಎನ್ನುತ್ತಾರೆ. ದಾವಾ ಶೆಡ್ಯೂಲ ಎ 1 ಹಾಗೂ ಶೆಡೂಲ ಬಿ ಆಸ್ತಿಗಳನ್ನು ತೆಗೆದುಕೊಳ್ಳುವ ಸಮಯದಲ್ಲಿ ದಾವಾ ಪೆಂಡಿಂಗ ಇತ್ತು ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸದರಿ ಆಸ್ತಿಗೆ ಸಂಬಂದಿಸಿದಂತೆ ಸರಕಾರ ಹಾಗೂ ಅರೆ ಸರಕಾರಿ ಹೈಕೋರ್ಟ ಹಾಗೂ ಇತರೆ ಕಡೆ ದಾವಾಗಳು ಪೆಂಡಿಂಗ ಇದ್ದವು ಎಂದರೆ ಸಾಕ್ಷಿ ನಾವು ತೆಗೆದುಕೊಳ್ಳುವ ಸಮಯದಲ್ಲಿ ಯಾವದರೂ ಇರಲಿಲ್ಲ ಎನ್ನುತ್ತಾರೆ. 1 ಎಕರೆ 8 ಆಣೆ ಇನ್ನೊಂದು ಪ್ರಾಪರ್ಟಿ 2 ಎಕರೆ 5 ಗುಂಟೆ ಈ ಎರಡೂ ಆಸ್ತಿಗಳ ಚಕಬಂದಿ ನನಗೆ ಹೇಳಲು ಆಗುವದಿಲ್ಲ. ಪ್ರತಿವಾದಿ ನಂಃ 1 ರಿಂದ 9 ರವರು ವಾದಿ 1 ರಿಂದ 5 ರವರಿಗೆ ಶೆಡ್ಯೂಲ ಎ 1 ಹಾಗೂ ಬಿ ಶೆಡ್ಯೂಲ ಆಸ್ತಿಗಳನ್ನು ಅಗ್ರಿಮೆಂಟ ಆಫ್ ಸೇಲ ಬರೆದುಕೊಟ್ಟರುತ್ತಾರೆಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸದರಿ ಆಸ್ತಿಗಳನ್ನು ನೀವು ಯಾವ ವರ್ಷದಲ್ಲಿ ಖರೀದಿ ಹಿಡಿದಿದ್ದೀರಿ ಎಂದರೆ ಸಾಕ್ಷಿ 2000 ನೇ ಸಾಲಿನಲ್ಲಿ ಎನ್ನುತ್ತಾರೆ. 2000 ನೇ ಸಾಲಿನವರೆಗೂ ಸದರಿ ಆಸ್ತಿ ಬಗ್ಗೆ ದಾವಾ ಗೌ. ಸರ್ವೋಚ್ಚ ನ್ಯಾಯಾಲಯದಲ್ಲಿ ಪೆಂಡಿಂಗ ಇತ್ತು ಎಂದರೆ ಸಾಕ್ಷಿ ಸುಳ್ಳು ಎನ್ನುತ್ತಾರೆ. ಸದರಿ ಆಸ್ತಿಗಳನ್ನು ಖರೀದಿಗೆ ತೆಗೆದುಕೊಳ್ಳುವಾಗ ನೀವು ಅಕ್ಕಪಕ್ಕದವರಿಗೆ ಆಸ್ತಿ ಬಗ್ಗೆ ವಿಚಾರಿಸಿದ್ದೀರಾ ಎಂದರೆ ಸಾಕ್ಷಿ ವಿಚಾರಿಸಿದ್ದೇನೆ ಎನುತ್ತಾರೆ. ಸದರಿ ಆಸ್ತಿ ಬಗ್ಗೆ 2000 ನೇ ಸಾಲಿನಲ್ಲಿ ಪ್ರತಿವಾದಿ 2 ರಿಂದ 9 ಹಾಗೂ ಕೋ-ಆಪಿರೇಟಿವ ಸೊಸೈಟಿ ನಲ್ಲಿ ದಾವಾ ಚಾಲ್ತಿಯಲ್ಲಿತ್ತು ಎಂದರೆ ಸಾಕ್ಷಿ ಇರಲಿಲ್ಲ ಎನ್ನುತ್ತಾರೆ. ಸಾಕ್ಷಿ ಮುಂದುವರೆದು ಅದ್ಯಾಪಕ ಕೋ-ಆಪ ಸೊಸೈಟಿ ಕೇಸು 1991 ರಿಂದ 1999 ರವರೆಗೆ ಹೈಕೋರ್ಟನಲ್ಲಿ ಚಾಲ್ತಿಪಿಯಲ್ಲಿದ್ದು ಮುಕ್ತಾಯಗೊಂಡಿತು ಎನ್ನುತ್ತಾರೆ. ಸದರಿ ದಾವಾ ಹೈಕೋರ್ಟನಲ್ಲಿ ನಿಖಾಲಿಯಾದ ನಂತರ ಪ್ರತಿವಾದಿ 1 ರಿಂದ 9 ಹಾಗೂ ಅದ್ಯಾಪಕ ಸೊಸೈಟಿಯವರು ಗೌ. ಸರ್ವೋಚ್ಚ ನ್ಯಾಯಾಲಯಕ್ಕೆ ಮನವಿ ಸಲ್ಲಿಸಿದರು ಎಂದರೆ ಸಾಕ್ಷಿ ಹಾಕಿಲ್ಲ ಎನ್ನುತ್ತಾರೆ. ಗೌ. ಸರ್ವೋಚ್ಚ ನ್ಯಾಯಾಲಯಲ್ಲಿ ಹಾಕಿದ್ದರೂ ಕೂಡಾ ನನಗೆ ಆ ಬಗ್ಗೆ ಮಾಹಿತಿ ಇದ್ದರೂ ನಾನು ಹಾಕಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸಾರಮರಾನ್ಯವಾಗಿ ಒಬ್ಬ ವ್ಯಕ್ತಿ ಯಾವದಾದರೂ ಒಂದು ಆಸ್ತಿ ಖರೀದಿ ಮಾಡಬೇಕಾದರೆ ಆ ಆಸ್ತಿ ಕುರಿತು ಎಲ್ಲಾ ಮಾಹಿತಿಗಳನ್ನು ತಿಳಿದುಕೊಳ್ಳಬೇಕಾಗುತ್ತದೆಂದರೆ ಸರಿ. ಗೌ. ಸರ್ವೋಚ್ಚ ನ್ಯಾಯಾಲಯದಲ್ಲಿ ನಿಖಾಲಿಯಾದ ನಂತರ ಮುಂದೆ ಏನಾಯಿತು ಎಂಬುದು

ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ತಿಳಿದುಕೊಂಡಿದ್ದೇನೆ ಎನ್ನುತ್ತಾರೆ. ಯೂರ ಕಡೆಯಿಂದ ಎನು ತಿಳಿದು ಕೊಂಡಿದ್ದೀರಿ ಎಂದರೆ ಸಾಕ್ಷಿ ಈಗ ನನಗೆ ನೆನಪಿಲ್ಲ ಎನ್ನುತ್ತಾರೆ. ನಾನು ಯಾರಿಂದಲೂ ಏನೂ ತಿಳಿದುಕೊಂಡಿಲ್ಲ ಆ ಕಾರಣಕ್ಕೆ ನನಗೆ ಗೌ. ಸರ್ವೋಚ್ಚ ನ್ಯಾಯಾಲಯದಲ್ಲಿ ಕೇಸು ಇದ್ದ ವಿಷಯ ನನಗೆ ಗೊತ್ತಿಲ್ಲ ಎಂದರೆ ಸಾಕ್ಷಿ ವ್ಯಾಜ್ಯ ಯಾವದಾದರೂ ಇರಲಿಲ್ಲ ಆಸ್ತಿ ಬಗ್ಗೆ ನಾನು ಸಮಗ್ರ ಮಾಹಿತಿ ತಿಳಿದುಕೊಂಡಿರುತ್ತೇನೆಂದು ನುಡಿಯುತ್ತಾರೆ. ಸದರಿ ಆಸ್ತಿಯನ್ನು ಖರೀದಿ ಮಾಡುವದಕ್ಕಿಂತ ಮಾದಲು ಪತ್ರಿಕಾ ಪ್ರಕಟಣೆ ಕೊಟ್ಟಿದ್ದೀರಾ ಎಂದರೆ ಸಾಕ್ಷಿ ಕೊಟ್ಟಿಲ್ಲ ಎನ್ನುತ್ತಾರೆ. ಪ್ರತಿವಾದಿ 1 ರಿಂದ 9 ರವರು ವಾದಿಯರಿಗೆ Irrevocable power of attorney ಬರೆದುಕೊಟ್ಟಿರುತ್ತಾರೆಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಪ್ರತಿವಾದಿ 1 ರಿಂದ 9 ರವರು ಸದರಿ ಆಸ್ತಿ ಕುರಿತು ವಾದಿಯರಿಗೆ ಅಗ್ರಿಮೆಂಟ ಆಪ್ ಸೇಲ ಮಾಡಿಕೊಟ್ಟಿರುತ್ತಾರೆಂದರೆ ಸಾಕ್ಷಿ ಸುಳ್ಳು ಎನ್ನುತ್ತಾರೆ. ಸದರಿ ವಿಷಯ ನನಗೆ ಗೊತ್ತಿದ್ದೂ ಆದರೂ ನಾನು ಕಾನೂನು ಬಾಹೀರವಾಗಿ ಕ್ರಯ ಪತ್ರ ಮಾಡಿಸಿಕೊಂಡಿರುತ್ತೇನೆಂದರೆ ಸಾಕ್ಷಿ ಖರೀದಿ ಪತ್ರವನ್ನು ಕಾನೂನುಬದ್ದವಾಗಿ ಮಾಡಿಕೊಂಡಿರುತ್ತೇನೆ ಎನ್ನುತ್ತಾರೆ. ಪ್ರತಿವಾದಿ 1 ರಿಂದ 9 ರವರು ವಾದಿಯರಿಗೆ ಪಾವರ ಆಪ್ ಅಟಾರ್ನಿ ಕೊಡುವದಕ್ಕಿಂತ ಮೊದಲು ವೈ ನರಸಿಯ್ಯ ಯಲ್ಲಪ್ಪ ರವರಿಗೆ ಪಾವರ ಆಪ ಅಟಾರ್ನಿ ಕೊಟ್ಟಿದ್ದು ಅದನ್ನು ರದ್ದುಪಡಿಸಿ ವಾದಿಯರಿಗೆ ಪಾವರ ಆಪ್ ಅಟಾರ್ನಿ ಕೊಟ್ಟಿರುತ್ತಾರೆಂದರೆ ಈ ವಿಷಯ ನನಗೆ ಗೊತ್ತಿಲ್ಲ ಎನ್ನುತ್ತಾರೆ. ನಂತರ ಸದರಿ ಜಿಪಿಎ ಕ್ಯಾನ್ಸಲ ಮಾಡಿ ಪ್ರತಿವಾದಿ1 ರಿಂದ 9 ರವರು ವಾದಿ 1 ಹಾಗೂ ಜಗದೀಶ ಕಲ್ಯಾಣಶೆಟ್ಟರ ರವರಿಗೆ ಮಾಡಿಕೊಟ್ಟಿರುತ್ತಾರೆಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ದಾವಾ ಆಸ್ತಿ ಬಗ್ಗೆ ವ್ಯಾಜ್ಯ ಇರುವ ಕುರಿತು ವಾದಿಯರು ದಿನಾಂಕಃ 17.02.2003 ರಂದು ಪತ್ರಿಕಾ ಪ್ರಕಟಣೆ ಕೊಟ್ಟಿರುತ್ತಾರೆಂದರೆ ಸರಿ. ಸದರಿ ಆಸ್ತಿಯನ್ನು ನೀವು ಯಾರ ಕಡೆಯಿಂದ ಖರೀದಿ ಮಾಡಿದ್ದೀರಿ ಎಂದರೆ ಸಾಕ್ಷಿ ಬೆನಕಟ್ಟಿ ಪರಿವಾರದವರ ಜಿಪಿಎ ಹೋಲ್ಡರಾದ ಸಿ ವಿ ರಟ್ಟಿಹಳ್ಳಿ ವಕೀಲರಿಂದ ಖರೀದಿ ಮಾಡಿರುತ್ತೇವೆ ಎನ್ನುತ್ತಾರೆ. ಸದರಿ ಪಾವರ ಆಪ ಅಟಾರ್ನಿಯಲ್ಲಿ ಅದು ಯಾವ ಆಸ್ತಿ ಎಂಬದನ್ನು ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಸದರಿ ಪಾವರ ಆಪ ಅಟಾರ್ನಿ ಪ್ರಕಾರ ಯಾವ ಆಸ್ತಿ ಯಾವ ಕ್ಷೇತ್ರ ಎಂದು ಹೇಳುತ್ತೀರಾ ಎಂದರೆ ಸಾಕ್ಷಿ ಒಂದು ಆಸ್ತಿ 627, 4 ಎಕರೆ 10 ಗುಂಟೆ ಸರ್ವೆ ನಂಃ623, 2 ಎಕರೆ 8 ಆಣೆ ಎಂದು ನುಡಿಯುತ್ತಾರೆ. ವಾದಿಯರಿಗೆ ಬರೆದುಕೊಟ್ಟಿರುವ ಅಗ್ರಿಮೆಂಟ

ಆಪ್ ಸೇಲ ಮತ್ತು ಎರಡು ಇರ್ರವೋಕೇಬಲ ಜನರಲ್ ಪಾವರ ಆಪ್ ಅಟಾರ್ನಿ ಇವುಗಳಲ್ಲಿ ಎನು ಕಂಡೀಶನಗಳು ಇವೆ ಎಂದು ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ತಿಳಿದುಕೊಂಡಿದ್ದೇನೆ ಆದರೆ ಅಗ್ರಿಮೆಂಟ ಸುಳ್ಳು ಎನ್ನುತ್ತಾರೆ. ನಿಮ್ಮ ಪ್ರಕಾರ ಯಾವ ರೀತಿ ಸುಳ್ಳು ಎಂದು ಹೇಳುತ್ತೀರಾ ಎಂದರ ಸಾಕ್ಷಿ 1991 ರಿಂದ 1999 ರವರೆಗೆ 627 ಆಸ್ತಿ ಕುರಿತು ಗೌ. ಹೈಕೋರ್ಟದಿಂದ ಸ್ಟೇ ಆರ್ಡರ ಇತ್ತು, 1 ನೇ ಪ್ರತಿವಾದಿ ಬೆನಕಂಟ್ಟಿ ರವರು ಸೀನಿಯರಿ ಅಡ್ವೋಕೇಟ ಆಗಿದ್ದರು, ಒಬ್ಬ ಅಡ್ವೋಕೇಟ ಹೈಕೋರ್ಟ ಆರ್ಡರ ಎಂದೂ ಕಂಟೆಪ್ಟ ಮಾಡಾಕ ಹೋಗಲ್ಲ, ಕಾಗದಗಳು ಯಾವವು ಮಾಡಿಕೊಟ್ಟಿದ್ದಾರೆಂದು ಹೇಳು ತ್ತಿದ್ದಾರೆ ಆ ಕಾಗದಗಳು ರಜಿಸ್ಟರ ಆಗಿರಲಿಲ್ಲ ಆ ಕಾರಣಕ್ಕೆ ನಾನು ಅಗ್ರಿಮೆಂಟ ಸುಳ್ಳು ಎಂದು ಹೇಳುತ್ತಿದ್ದೇನೆ. ಈ ವಿಷಯವನ್ನು ನಿಮ್ಮ ಕೈಪಿಯತ್ತನಲ್ಲಿ ನಮೂದು ಮಾಡಿದ್ದೀರಾ ಎಂದರೆ ಸಾಕ್ಷಿ ಈಗಿನ ಕೈಪಿಯತ್ತನಲ್ಲಿ ನಮೂದು ಮಾಡಿದ್ದೇನೆ ಎನ್ನುತ್ತಾರೆ. ನಾನು ಈ ಮೊದಲು ಸಲ್ಲಿಸಿದಂ ತಕರಾರಿನ

ಕೈಪಿಯತ್ತನಲ್ಲಿಈ ಕುರಿತು ಮಾಹಿತಿ ಕೊಟ್ಟಿಲ್ಲ ಎಂದರೆ ಸಾಕ್ಷಿ ನೆನಪಿಲ್ಲ ಎನ್ನುತ್ತಾರೆ. ಪ್ರತಿವಾದಿ 1 ರಿಂದ 9 ರವರು ಸದರಿ ಇರ್ರವೋಕೇಬಲ ಜನರಲ್ ಪಾವರ ಆಪ್ ಅಟಾರ್ನಿ ಹಾಗೂ ಸೇಲ ಅಗ್ರಿಮೆಂಟ ಪ್ರಕಾರ ವಾದಿಯರಿಗೆ ಆಸ್ತಿ ಮಾರಾಟ ಮಾಡುತ್ತೇವೆಂದು ಮಾತುಕೊಟ್ಟಿದ್ದರೂ ವಿಷಯ ನನಗೆ ಗೊತ್ತಿದ್ದರೂ ಸಾಕ್ಷಿ ಸುಳ್ಳು ಎನ್ನುತ್ತಾರೆ. ಇಲ್ಲಿಯವರಗೊ ಪ್ರತಿವಾದಿ 1 ರಿಂದ 9 ರವರು ವಾದಿಯರಿಗೆ ನೀಡಿದ ಇರ್ರವೋಕೇಬಲ ಜನರಲ್ ಪಾವರ ಆಪ್ ಅಟಾರ್ನಿ ವನ್ನು ರದ್ದು ಮಾಡಿಲ್ಲ ಎಂದರೆ ಸಾಕ್ಷಿ ಸದರಿ ದಾಖಲೆಗಳು ಸುಳ್ಳು ಇರುವ ಕಾರಣ ಅವುಗಳನ್ನು ರದ್ದು ಮಾಡುವ ಅವಶ್ಯಕತೆ ಬರುವದಿಲ್ಲ ಎನ್ನುತ್ತಾರೆ. ವಾದಿಯರಿಗೆ ಪ್ರತಿವಾದಿ 1 ರಿಂದ 9 ರವರು ಇರ್ರವೋಕೇಬಲ ಜನರಲ್ ಪಾವರ ಆಪ್ ಅಟಾರ್ನಿ ಕೊಟ್ಟಿದ್ದು ನನಗೆ ಮಾಹಿತಿ ಇತ್ತು ಎಂದರೆ ಸಾಕ್ಷಿ ಅದು ಸುಳ್ಳು ಎನ್ನುತ್ತಾರೆ. ಪ್ರತಿವಾದಿ1 ರಿಂದ 9 ರವರು ವಾದಿಯರಿಗೆ ಒಂದು ಎಕರೆಗೆ 1 ಲಕ್ಷ 25 ಸಾವಿರಕ್ಕೆ ಒಂದು ಆಸ್ತಿ ಹಾಗೂ ಮತ್ತೊಂದು ಆಸ್ತಿಯನ್ನು ಒಂದು ಎಕರೇಗೆ 1 ಲಕ್ಷ 35 ಸಾವಿರದಂತೆ ಮಾರಾಟ ಮಾಡಲು ಒಪ್ಪಿಕೊಂಡಿರುತ್ತಾರೆಂದರೆ, ಶೆಡ್ಯೂಲ ಬಿ ಆಸ್ತಿಯನ್ನು ಒಂದು ಕರೆಗೆ 1,35,500/- ಗಳಿಗೆ ಮಾರಾಟ ಮಾಡಲು ಒಪ್ಪಿದ್ದಾರೆಂದರೆ ಸಾಕ್ಷಿ ಸುಳ್ಳು ಎನ್ನುತ್ತಾರೆ. ಈ ಪ್ರಕಾರ ಒಟ್ಟು ಕ್ರಯದ ಹಣ 8,67,468-50 ಗಳಿಗೆ ಮಾರಾಟ ಮಾಡಲು ಒಪ್ಪಿಕೊಂಡಿದ್ದರೆಂದರೆ ಸಾಕ್ಷಿ ಸುಳ್ಳು ಎನ್ನುತ್ತಾರೆ. ಪ್ರತಿವಾದಿ 1 ಬೆನಕಟ್ಟಿ ರವರು ವಕೀಲರಿಂದ ಅವರು ಎನೂ ಮಾಡಿದ್ದರೋ ಅವೆಲ್ಲವನ್ನು ನನಗೆ ತಿಳಿಸಿರುತ್ತಾರೆಂದರೆ ಸಾಕ್ಷಿ ಅವರ ಜಿಪಿಎ ಹೋಲ್ಡರ ಆದ ರಟ್ಟಿಹಳ್ಳಿ ವಕೀಲರು ತಿಳಿಸಿರುತ್ತಾರೆಂದು ಸಾಕ್ಷಿ ನುಡಿಯುತ್ತಾರೆ. ನಾನು ವಾದಿಯರು ಕೊಟ್ಟಂತಹ ಕ್ರಯದ ಹಣಕ್ಕಿಂತ ಹೆಚ್ಚಿನ ಹಣ ಕೊಡುತ್ತೇನೆಂದು ಹೇಳಿ ವಾದಿಯರಿಗೇ ವಂಚನೆ ಮಾಡಿರುತ್ತೇನಂದರೆ ಸಾಕ್ಷಿ ಅದು ಸುಳ್ಳು ಎನ್ನುತ್ತಾರೆ.

**(ಪಾಟೀ ಸವಾಲುಃ ವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಕಾಲಾವಕಾಶ ನೀಡಲಾಯಿತು)**

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

1 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.